"ಸಾರ್... ಡಾಕ್ಟರ್ ಹತ್ತಿರ ಹೋಗಿಬರೋಣ..."

ಆನಂದ್ ಕಾರಿನ ಕೀ ತಗೊಂಡು ತಯಾರಾಗಿ ನಿಂತು ಬಿಟ್ಟಿದಾನೆ...

"ಓಹ್... ಅದೆಲ್ಲ ಬೇಡಪ್ಪ... ಲತಿಕಾ ಹೇಳಿದ ಹಾಗೆ ಸ್ವಲ್ಪ ರೆಸ್ಟ್ ತಗೊಂಡ್ರೆ... ಎಲ್ಲ ಸರಿ ಹೋಗತ್ತೆ."

ಅರ್ಧ ದಿನ ಸಿ.ಎಲ್. ಬರೆದು ಕುಳಿತಲ್ಲಿಂದ ಏಳುವಾಗ ಅವಳ ಫೋನ್ ಬಂತು... ಕಳೆದಸಲ ಗುರುವಾಯೂರಿಗೆ ಹೋದಾಗ ತೆಗೆದ ಫೋಟೊ ಈಗ ಕಾಂಟೆಕ್ಟ್ ಪಿಕ್ಚರಾಗಿ ಮೊಬೈಲ್‌ನಲ್ಲಿ ಸೇರಿಕೊಂಡಿತ್ತು. ಹಣೆಗೆ ಗಂಧದ ತಿಲಕ, ಕೇರಳದ ಸೆಟ್‌ಪಂಚೆಯನ್ನುಟ್ಟುಕೊಂಡು, ಆ ನಿಷ್ಕಳಂಕ ನಗುವನ್ನು ನೋಡುತ್ತಾ ಫೋನನ್ನು ಕೈಗೆತ್ತಿಕೊಂಡೆ...

ಏನೋ ಒಂದು ತರಹದ ಕರಕರ ಶಬ್ದ ಮೊದಲು ಕೇಳಿಸಿತು. ಬೆಡ್ ರೂಮಿನಲ್ಲಿದ್ದ ಮುತ್ತಜ್ಜನ ಹಳೆಯ ಗಡಿಯಾರದ ಪೆಂಡುಲಮ್ ಚಲಿಸುವ ಟಿಕ್ ಟಿಕ್ ಶಬ್ದ ಕೇಳಿಸಿತು. ಮಧ್ಯಾಹ್ನ ನಿದ್ರೆ ಮಾಡುವಾಗ ಫೋನಿಗೆ ಗೊತ್ತಿಲ್ಲದೆ ಕೈಯೇನಾದರೂ ತಟ್ಟಿರಬಹುದು ಎಂದಂದುಕೊಂಡೆ. ಹಿಂದೆ ಕೆಲವೊಮ್ಮೆ ಹಾಗೆ ಆಗಿದ್ದೂ ಇದೆ. ಕೆಲವು ಸಲ ಫೋನು ಹಾಸಿಗೆ ಮೇಲಿಟ್ಟು ಹಾಗೆಯೇ ಅದರ ಮೇಲೆ ನಿದ್ರೆ ಹೋದದ್ದೂ ಇದೆ. ಇನ್ನೇನು ಫೋನ್ ಲೈನ್ ಕಟ್ ಮಾಡಬೇಕೂಂತ ಇರುವಾಗ ಇದ್ದಕ್ಕಿದ್ದಂತೆ ಗಂಡಸರ ಧ್ವನಿ ಕೇಳಿಸಿತು. ಜೊತೆಗೆ ಬಿರುಗಾಳಿಯಂತೆ ಅವಳ ಮೃದುವಾದ ಪಿಸುಗುಟ್ಟುವಿಕೆ ಕಿವಿಗೆ ಅಪ್ಪಳಿಸಿತು.

ಗಿರಿಧರ ಹಿಂದಕ್ಕೆ ಹೊರಟು ಹೋಗಿದ್ದ... ಹದಿನಾಲ್ಕು ವರ್ಷಗಳಿಂದ ನನ್ನನ್ನು ಉದ್ದೀಪಿಸುತ್ತಿದ್ದ ಅದೇ ಆರ್ದ್ರತೆ ತುಂಬಿದ ಧ್ವನಿ. ಸ್ನಾನ ಮುಗಿಸಿ ಕಂಕುಳಲ್ಲೂ ಎದೆಯಮೇಲೂ ಅವಳು ಹಚ್ಚಿಕೊಳ್ಳುವ ಚಂದನದ ಪರಿಮಳವುಳ್ಳ ಪರ್‌ಫ್ಯೂಂನಲ್ಲಿ ವ್ಯಾಪಿಸಿದ ಬೆವರಿನ ಮತ್ತನ್ನು ಏರಿಸಿಕೊಂಡ ಸುವಾಸನೆ, ಮೂಗಿನೊಳಗಿನಿಂದ ಶ್ವಾಸಕೋಶಗಳವರೆಗೂ ಇಳಿಯಿತು. ನಿಶೆ ಹೆಚ್ಚಾಗುತ್ತಿದ್ದಂತೆ, ಅವಳ ಕಿವಿಗಳಿಗೆ ಹಿಂದಿನಿಂದ ಒದ್ದೆಯಾದ ಕೂದಲಿನೆಳೆಗಳು ಕೆನ್ನೆಗಳನ್ನು ಸ್ಪರ್ಶಿಸುತಿದ್ದವು. ಹರಡಿಕೊಂಡ ಕಾಡಿಗೆಯಿಂದಾಗಿ ಕಣ್ಣುಗಳಿಗೆ ಕತ್ತಲೆ ಆವರಿಸಿಕೊಳ್ಳುತ್ತಿತ್ತು. ಅವುಗಳೆಲ್ಲವೂ ತನ್ನ ಸ್ವಂತ ಆಸ್ತಿಯೆಂದು ಇದುವರೆಗೂ ಅಂದುಕೊಂಡಿದ್ದ. ಇಷ್ಟು ದಿನಗಳಿಂದಲೂ ಹಾಗೆಯೇ ನೆನೆದುಕೊಂಡು ಒಳಗಡೆಯೇ ಖುಷಿಯೊಂದಿಗೆ ಬಹಳಷ್ಟು ಅಹಂಕಾರ ಪಟ್ಟುಕೊಂಡಿದ್ದ. ಈಗ ತಿರಸ್ಕಾರದ ನಗುವೊಂದು ತನ್ನ ಅರಿವಿಗೆ ಬಾರದೆ ತುಟಿಯ ಮೇಲೆ ಕಾಣಿಸಿಕೊಂಡಿತು.

"ಹಾಂ... ಸಾರ್ ತಾವಿನ್ನೂ ಹೋಗಿಲ್ವಾ?..."

ಊಟ ಮುಗಿಸಿ, ತೊಳೆದ ಊಟದ ಬಟ್ಟಲನ್ನು ಜೋಡಿಸಿಡುವಾಗ ಆಶ್ಚರ್ಯದಿಂದ ಲತಿಕಾ ಕೇಳಿದಳು.

"ಹೋಗಿ ಸಾರ್ ಮನೆಗೆ... ಹೆಂಡತಿ ಹತ್ತಿರ ಸ್ವಲ್ಪ ಅಮೃತಾಂಜನ ಅಥವಾ ಬಾಂ ಏನಾದರೂ ಹಚ್ಚಿ ಕೊಡೊದಿಕ್ಕೆ ಹೇಳಿ... ಎಲ್ಲ ಸರಿಯಾಗತ್ತೆ." ಅವಳ ಮುಖದಲ್ಲಿ ನಗು.

ಒಂದುವೇಳೆ, ಈಗಲೇ ಏನಾದರೂ ಮನೆಗೆ ಹೋದರೆ... ಕೆಲವು 'ಎ' ಸರ್ಟಿಫಿಕೇಟ್ ಸಿನಿಮಾಗಳಲ್ಲಿ ಕಾಣುವಂತೆ ಬಾಗಿಲನ್ನು ಒದ್ದು ತೆರೆಯುವ ಗಂಡನನ್ನೂ ದಿಗ್ಭ್ರಾಂತಗೊಂಡು ನಿಂತ ಅವಳ ಪ್ರಿಯಕರನನ್ನೂ ಜೊತೆಗೆ ಅರ್ಧನಗ್ನಳಾದ ಅವಳನ್ನೂ... ಅಂತಹ ದೃಶ್ಯವನ್ನು ಕಲ್ಪಿಸಿಕೊಳ್ಳಲಾದರೂ ಆಗುತ್ತದೆಯೇ ತನಗೆ...

ಸ್ವಲ್ಪ ಹೊತ್ತು ಮೇಜಿನ ಮೇಲೆ ಮುಖವನ್ನಿಟ್ಟುಕೊಂಡು ಮಲಗಿದೆ. ಅನಂತರ ಕುರ್ಚಿಯನ್ನು ಹಿಂದಕ್ಕೆ ತಳ್ಳಿ ಎದ್ದೆ.

"ಸಾರ್... ಆಟೋರಿಕ್ಷಾದಲ್ಲಿ ಹೋಗಿ..."